**SOLID WASTE MANAGEMENT ROUND TABLE ( SWMRT)**

# PRESS NOTE

**ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ರೌಂಡ್ ಟೇಬಲ್ (SWMRT)**

**ಪತ್ರಿಕಾ ಟಿಪ್ಪಣಿ: ತಕ್ಷಣ ಬಿಡುಗಡೆಗಾಗಿ**

**ಬಿಬಿಎಂಪಿಯ ಘನ ತ್ಯಾಜ್ಯ ನಿರ್ವಹಣೆ ಕರಡು ಬೈಲಾ ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ದುರ್ಬಲಗೊಳಿಸಿದೆ, ಪುನರ್ರಚನೆಯಾಗಬೇಕು**

**(ಬೆಂಗಳೂರು, ಅಕ್ಟೋಬರ್ 30, 2019)**

**ಸೆಪ್ಟೆಂಬರ್ 26, 2019ರಂದು ಬಿಬಿಎಂಪಿ, ಕರಡು ಘನ ತ್ಯಾಜ್ಯ ನಿರ್ವಹಣಾ ಬೈಲಾಗಳನ್ನು ಪ್ರಕಟಿಸಿ, ಅದಕ್ಕೆ ಸಾರ್ವಜನಿಕರಿಂದ ಪ್ರತಿಕ್ರಿಯೆಗಳನ್ನು ಸ್ವೀಕರಿಸಲು ಅಕ್ಟೋಬರ್ 31, 2019ರ ದಿನಾಂಕವನ್ನು ನಿಗದಿಪಡಿಸಿದೆ. SWMRT ಇದನ್ನು ಪರಿಶೀಲಿಸಿದಾಗ ಕಂಡುಬಂದದ್ದು ಎಂದರೆ ಘನ ತ್ಯಾಜ್ಯ ನಿರ್ವಹಣಾ ಬೈಲಾಗಳನ್ನು ಜಾರಿಗೊಳಿಸಿದ್ದೇ ಆದರೆ ಅದು ಕರ್ನಾಟಕ ಉಚ್ಚ ನ್ಯಾಯಾಲಯ, ಅಷ್ಟೇ ಏಕೆ ಸ್ವತಃ ಬಿಬಿಎಂಪಿಯು ಘನ ತ್ಯಾಜ್ಯ ನಿರ್ವಹಣಾ ಪದ್ಧತಿಗಳನ್ನು ಸುಗಮಗೊಳಿಸುವಲ್ಲಿ ವಹಿಸಿದ ಕಳೆದ ಒಂದು ದಶಕದ ಪರಿಶ್ರಮವನ್ನು ಸಂಪೂರ್ಣವಾಗಿ ದುರ್ಬಲಗೊಳಿಸಿಬಿಡುತ್ತದೆ ಮತ್ತು ಈ ವರೆಗೆ ಮಾಡಿರುವ ಪರಿಶ್ರಮದಲ್ಲಿ ಬಹುದೊಡ್ಡ ಹಿಂಜರಿಕೆಯನ್ನು ಉಂಟುಮಾಡಿ ಗುತ್ತಿಗೆದಾರರ ಏಕಸ್ವಾಮ್ಯವನ್ನು ಮರಳಿ ತರುವ ಪ್ರಯತ್ನವಾಗಿದೆ.**

ಬೈಲಾ ನಿರ್ದಿಷ್ಟವಾಗಿರಬೇಕು, ಪ್ರಾಯೋಗಿಕವಾಗಿರಬೇಕು, ನಿಯಂತ್ರಣ ಪ್ರಾಧಿಕಾರವು ತನ್ನ ಕರ್ತವ್ಯವನ್ನು ನಿಭಾಯಿಸಲು ಸಾಧ್ಯವಾಗುವಂತೆ ಅದನ್ನು ಯಾವುದೇ ಸಂದಿಗ್ಧತೆಯಿಲ್ಲದೆ ಕಾನೂನು ಅಥವಾ ಕಾರ್ಯನೀತಿಯನ್ನು ಅನುಷ್ಠಾನಕ್ಕೆ ತರುವ ಉದ್ದೇಶವನ್ನು ವ್ಯಕ್ತ ಪಡಿಸಬೇಕು. ಆದರೆ, ಬಿಬಿಎಂಪಿ ರಚಿಸಿರುವ ಘನ ತ್ಯಾಜ್ಯ ನಿರ್ವಹಣಾ ಬೈಲಾ ಕರಡು ಇದರಿಂದ ಬಹಳ ದೂರವಾಗಿದೆ.

ಈ ನಿಟ್ಟಿನಲ್ಲಿ ನಾವು ಬಿಬಿಎಂಪಿ ಘನ ತ್ಯಾಜ್ಯ ನಿರ್ವಹಣಾ ಬೈಲಾಗಳಿಗೆ SWMRT ಪ್ರತಿಕ್ರಿಯೆಯ ರೂಪದಲ್ಲಿ ಮಾಡಿದ ಕೆಲವು ಮುಖ್ಯ ಅವಲೋಕನಗಳನ್ನು ಸಾರ್ವಜನಿಕವಾಗಿ ಹಂಚಿಕೊಳ್ಳುತ್ತಿದ್ದೇವೆ; ಜನರಿಗೆ ಇದು ಅರ್ಥವಾಗಿ, ನಗರಕ್ಕಾಗಿ ಉತ್ತಮವಾದ, ಪರಿಸರದ ದೃಷ್ಟಿಯಿಂದ ಹೆಚ್ಚು ಸುಸ್ಥಿರವಾದ ಮತ್ತು ಆರ್ಥಿಕವಾಗಿ ಕಾರ್ಯಸಾಧ್ಯವಾದ ಯೋಜನೆಯನ್ನು ಹಾಕಿಕೊಳ್ಳಲು ಬಿಬಿಎಂಪಿ ಸಾಧ್ಯವಾಗುವಂತಾಗಬೇಕು ಎಂಬುದು ಇದರ ಉದ್ದೇಶ.

**ಮುಖ್ಯಾಂಶ– 5 ಪ್ರಮುಖ ಅವಲೋಕನಗಳೊಂದಿಗೆ**

---

**ಅವಲೋಕನ 1: ಶೂನ್ಯ ತ್ಯಾಜ್ಯದ ಅನುಷ್ಠಾನದ ಪ್ರಯತ್ನಿಸಿಲ್ಲ**

- **ಬಿಬಿಎಂಪಿಗೆ ಪ್ರಸ್ತುತ ಪ್ರತಿ ದಿನ 1200 ಟನ್ನುಗಳಷ್ಟು ತ್ಯಾಜ್ಯವನ್ನು ಸಂಸ್ಕರಿಸುವ ಸಾಮರ್ಥ್ಯವನ್ನು ಹೊಂದಿದೆ, ಹೀಗಾಗಿ, 5700 ಟನ್ನುಗಳಷ್ಟು ತ್ಯಾಜ್ಯವನ್ನು ಒಂದು ಕಡೆ ಸಂಗ್ರಹಿಸುವುದನ್ನು ಬಿಟ್ಟು, ಸರಿಯಾಗಿ ಸಂಸ್ಕರಿಸಲು ಬಿಬಿಎಂಪಿ ಹೇಗೆ ಸಜ್ಜುಗೊಳ್ಳುತ್ತದೆ ಎಂಬುದು ಬೈಲಾದಲ್ಲಿ ಅಸ್ಪಷ್ಟವಾಗಿದೆ,** ಬಿಬಿಎಂಪಿ ಈ ಬೈಲಾ ಮೂಲಕ ತ್ಯಾಜ್ಯದ ಎಲ್ಲಾ ಬೃಹತ್ ಉತ್ಪಾದಕರಿಂದ ಅನುದಾನಿತ ಸೇವಾ ಶುಲ್ಕವನ್ನು ವಸೂಲಿ ಮಾಡುವುದಾಗಿ ಪ್ರಸ್ತಾಪಿಸಿರುವುದರಿಂದ, ಬಿಬಿಎಂಪಿ ಮೂಲಕ ನಿರ್ವಹಣೆಯಾಗುವ ತ್ಯಾಜ್ಯದ ಪ್ರಮಾಣ ಈಗಿರುವ, ಮನೆಮನೆಯಿಂದ ಸಂಗ್ರಹಿಸಲಾಗುವ ದಿನಕ್ಕೆ 4400 ಟನ್ನುಗಳಿಂದ ತೀವ್ರವಾಗಿ ಹೆಚ್ಚಾಗಿ ದಿನಕ್ಕೆ 5700 ಟನ್ನುಗಳನ್ನು ತಲುಪುತ್ತದೆ.

  **ಗಮನಿಸಬೇಕಾದ ಸ್ವಾರಸ್ಯಕರ ಅಂಶವೆನೆಂದರೆ,ತ್ಯಾಜ್ಯವನ್ನು ಡಂಪಿಗ್ ಜಾಗಕ್ಕೆ ಹಾಕುವುದನ್ನು ತಡೆಗಟ್ಟಲು ಯಾವುದೇ ಯೋಜನೆಯನ್ನು ಪ್ರಸ್ತಾಪಿಸಿಲ್ಲ ಹಾಗೆಯೇ ಬಿಬಿಎಂಪಿಯು ಕೆಲವಷ್ಟೆ ವಿಕೇಂದ್ರಿ ಕೃತ ಸಂಗ್ರಹಣಾ ಕೇಂದ್ರಗಳ ಸ್ಥಾಪಿಸುವ ಬಗ್ಗೆ ಉಲೇಖಿನ ಮಾಡಿ, ಮತ್ತು 'ವಿವಿಧ ಪ್ರಕಾರದ ಘನ ತ್ಯಾಜ್ಯವನ್ನು ಸಂಸ್ಕರಿಸುವ ಜವಾಬ್ದಾರಿಯನ್ನು 'ತ್ಯಾಜ್ಯ ಉತ್ಪಾದಕರು, ಬಿಬಿಎಂಪಿ, ಏಜೆನ್ಸಿ/ನೊಂದಾಯಿಸಿರುವ ಸೇವಾದಾರರು ಎಂದು ಉಲ್ಲೇಖಿಸಲಾಗಿದೆ.**

# PRESS NOTE

- ಬೈಲಾ 35%ರಷ್ಟು ತ್ಯಾಜ್ಯವನ್ನು ಲ್ಯಾಂಡ್‌ಫಿಲ್ ಮಾಡಲಾಗುವುದು ಎಂದು ಹೇಳುತ್ತದೆ, ಆ ಮೂಲಕ ಕಸವನ್ನು ಸಂಸ್ಕರಿಸದೇ ಡಂಪಿಂಗ್ ಮಾಡಲು ಕಾನೂನಾತ್ಮಕ ಮಂಜೂರಾತಿಯನ್ನು ಪಡೆಯಲು ಪ್ರಯತ್ನಿಸುತ್ತದೆ. ಘನ ತ್ಯಾಜ್ಯ ನಿರ್ವಹಣೆ ಕಾಯ್ದೆ 2016ರಲ್ಲಿ ವಿಧಿಸಿರುವಂತೆ ಶೂನ್ಯ ಲ್ಯಾಂಡ್ ಫ್ಹಿಲ್‌ನ್ನು ಸಾಧಿಸುವ ಇಂಗಿತ ಇಲ್ಲಿ ಕಾಣುವುದಿಲ್ಲ.
- ಬಿಬಿಎಂಪಿಯು ಕಳೆದ ಕೆಲವು ವರ್ಷಗಳಿಂದ ಯಾವ ತಾತ್ತ್ವಿಕತೆಯ ಗುರಿಯ ಕಡೆಗೆ ಕೆಲಸ ಮಾಡುತ್ತಿತ್ತೋ ಅಂಥ ಸರ್ಕುಲರ್ ಇಕಾನಮಿಯ ತತ್ತ್ವದ ಕುರಿತು ಬೈಲಾ ಮೌನ ವಹಿಸುತ್ತದೆ.
- ಬಿಬಿಎಂಪಿ ರಾಷ್ಟ್ರ ಮಟ್ಟದಲ್ಲಿ ಪ್ರಶಂಸೆಯನ್ನು ಪಡೆದಿದ್ದ ತ್ಯಾಜ್ಯವನ್ನು ಕಡಿಮೆ ಮಾಡುವ ಯಾವುದೇ ನಿರ್ದೇಶನಗಳು, ಉದಾಹರಣೆಗೆ ಇವೆಂಟ್ ತ್ಯಾಜ್ಯ ನಿರ್ವಹಣೆ ಮತ್ತು ಹಬ್ಬಗಳ ತ್ಯಾಜ್ಯ ನಿರ್ವಹಣೆ ಇವುಗಳನ್ನು ಬೈಲಾ ಕಡೆಗಾಡಿಸಿದೆ ಮತ್ತು ಅವುಗಳನ್ನು ಸೇರಿಸಿಕೊಂಡಿಲ್ಲ.

**ಅವಲೋಕನ 2: ಏರುಪೇರಾದ ಅರ್ಥಶಾಸ್ತ್ರ ಮತ್ತು ಅನುಚಿತ ರಕ್ಷಣೆ**

ನಮ್ಮ ಅಂದಾಜುಗಳ ಪ್ರಕಾರ ತ್ಯಾಜ್ಯದ ಸಂಗ್ರಹ, ಸಾಗಣೆ ಮತ್ತು ಸಂಸ್ಕರಣೆಗಾಗಿ ಬಿಬಿಎಂಪಿ ಮಾಡುವ ವೆಚ್ಚ ಕೆ.ಜಿ.ಗೆ ಸುಮಾರು ರೂ.30 (ಬರೀ ಸಂಗ್ರಹ ಮತ್ತು ಸಾಗಣೆಗೆ ವೆಚ್ಚ ರೂ.7/ಕೆ.ಜಿ.). ಸ್ಯಾನಿಟರಿ ತ್ಯಾಜ್ಯದ ಪ್ರಾಧಿಕೃತ ವಿಲೇವಾರಿದಾರರ ಮೂಲಕ ಸಂಗ್ರಹ, ಸಾಗಣೆ ಮತ್ತು ಸಂಸ್ಕರಣೆಯ ವೆಚ್ಚವು ರೂ.22/ಕೆ.ಜಿ. ಆಗಿದೆ.

ಕರಡು ಬೈಲಾದ ಶೆಡ್ಯೂಲ್ VI – ಭಾಗ II ಬಿ ಪ್ರಕಾರ– ತಮ್ಮ ತ್ಯಾಜ್ಯವನ್ನು ಸಂಸ್ಕರಣೆ ಮಾಡದ ಯಾವುದೇ ಬೃಹತ್ ತ್ಯಾಜ್ಯ ಉತ್ಪಾದಕರು ಬಿಬಿಎಂಪಿ ಔಟ್‌ಸೋರ್ಸ್ ಮಾಡಿದ ಗುತ್ತಿಗೆದಾರ ಏಜೆನ್ಸಿಗೆ ತಮ್ಮ ತ್ಯಾಜ್ಯವನ್ನು ಕೊಡಬಹುದು ಮತ್ತು ಕೆ.ಜಿ.ಗೆ ರೂ.2ರಿಂದ ರೂ.4ರ ವರೆಗೆ ಅನ್ವಯವಾಗುವ ವಿವಿಧ ಪ್ರಕಾರದ ತ್ಯಾಜ್ಯದ ಪ್ರಕಾರ ಶುಲ್ಕ ಪಾವತಿ ಮಾಡಬಹುದಾಗಿದೆ.

**ಬೃಹತ್ (ಬಲ್ಕ್) ಪ್ರಮಾಣದಲ್ಲಿ ತ್ಯಾಜ್ಯವನ್ನು ಉತ್ಪಾದಿಸುವವರಿಗೆ ಬಿಬಿಎಂಪಿ ನಿಗದಿ ಮಾಡಿರುವ ಘನ ತ್ಯಾಜ್ಯ ನಿರ್ವಹಣೆಯ ಸೇವಾ ಶುಲ್ಕವು ಸುಮಾರು 80%ರಷ್ಟು ಸಬ್ಸಿಡಿಯನ್ನು ನೀಡುತ್ತದೆ, ನೊಂದಾಯಿತ ಸೇವಾದಾರರಿಗೆ ಇದು ಅನ್ಯಾಯದ ಸ್ಪರ್ಧಾತ್ಮಕ ಬೆಲೆಯಾಗುತ್ತದೆ, ಹೋಲಿಕೆಯಲ್ಲಿ ಇಷ್ಟು ಕಡಿಮೆ ದರವನ್ನು ಅವರು ತಲುಪಲು ಸಾಧ್ಯವಾಗುವುದೇ ಇಲ್ಲ.**

ಇದು, ಘನ ತ್ಯಾಜ್ಯ ನಿರ್ವಹಣೆ ನಿಯಮಾವಳಿ 2016ರಲ್ಲಿ ನಮೂದಿಸಿರುವಂತೆ 'ಮಾಲಿನ್ಯ ಮಾಡುವವರು ಪಾವತಿ ಮಾಡಬೇಕು' ಎಂಬ ತತ್ವವನ್ನು ಅನುಸರಿಸುವುದಿಲ್ಲ ಮತ್ತು ಘನ ತ್ಯಾಜ್ಯ ನಿರ್ವಹಣೆಯ ಬಿಬಿಎಂಪಿ ವೆಚ್ಚವನ್ನು ಬಹುಪಾಲು ಹೆಚ್ಚಿಸುತ್ತದೆ.

**ಅವಲೋಕನ 3: ಹಳೆಯ ಏಕಸ್ವಾಮ್ಯದ ಗುತ್ತಿಗೆದಾರ ವ್ಯವಸ್ಥೆಯ ಮರುಕಳಿಕೆ**

- ಬೈಲಾ, ಸಾಂಪ್ರದಾಯಿಕ ಔಟ್‌ಸೋರ್ಸ್ ಗುತ್ತಿಗೆದಾರ ವ್ಯವಸ್ಥೆಗೆ ಪರ್ಯಾಯವಾಗಿ ಸದೃಢವಾದ ಸುಸ್ಥಿರವಾದ ವೃತ್ತಿಪರ ಮಾದರಿಯಾಗಿ ವಿಕಾಸಗೊಂಡಿದ್ದ ಖಾಸಗಿ ಸಹಭಾಗಿತ್ವ, ಸಾಮಾಜಿಕ ಉದ್ಯಮಶೀಲತೆ ಮತ್ತು ಅನೌಪಚಾರಿಕ ವಲಯದ ಒಳಗೊಳ್ಳುವಿಕೆಯನ್ನು ಸಬಲಗೊಳಿಸಲು ಈ ಅವಕಾಶವನ್ನು ಬಳಸಿಕೊಳ್ಳಬಹುದಾಗಿತ್ತು. ಬೃಹತ್ ಉತ್ಪಾದಕರ ಮಟ್ಟಿಗೆ ಬಿಬಿಎಂಪಿ ಕರಡು ಬೈಲಾ ಅನುಸರಿಸಿರುವ ವಿಧಾನಕ್ಕೆ ನಮ್ಮ ಆಕ್ಷೇಪವಿದೆ. ಇದರಲ್ಲಿ ವೃತ್ತಿಪರತೆ ಮತ್ತು ಜವಾಬ್ದಾರಿಯುತ ತ್ಯಾಜ್ಯ ನಿಭಾವಣೆ ಮತ್ತು ಸಂಸ್ಕರಣೆಯನ್ನು ಮಾಡಿದ ಖಾಸಗಿ ಸಂಗ್ರಹ ಮತ್ತು ಸಾಗಣೆಯ **ನೊಂದಾಯಿಸಿರುವ ಸೇವಾದಾರರು** ಗಳಿಗೆ ಅವಕಾಶವಿಲ್ಲ.
- ತ್ಯಾಜ್ಯದ ಸಂಗ್ರಹ ಮತ್ತು ಸಾಗಣೆಗಾಗಿ ಕೇವಲ ಕ್ಷೇತ್ರಾಧಿಕಾರದ ಹಕ್ಕುಗಳನ್ನು ನೀಡಲಾಗಿರುವ ಔಟ್‌ಸೋರ್ಸ್ ಮಾಡಲಾಗಿರುವ ಗುತ್ತಿಗೆದಾರರು ಮಾತ್ರ ಕಾರ್ಯಾಚರಣೆ ಮಾಡುವುದನ್ನು ಮುಂದುವರಿಸುತ್ತಾರೆ. **ಇದು**

**ಮತ್ತೊಮ್ಮೆ ಗುತ್ತಿಗೆದಾರರ ಏಕಸ್ವಾಮ್ಯವನ್ನು ಮರಳಿ ತರುತ್ತದೆ. ಇದರಿಂದಾಗಿ ಸೃಜನಶೀಲ, ಸುಸ್ಥಿರವಾದ ಪರಿಹಾರಗಳನ್ನು ಅಭಿವೃದ್ಧಿ ಪಡಿಸಲು ಪರ್ಯಾಯ ಮುಕ್ತ ಮಾರುಕಟ್ಟೆಗೆ ಅವಕಾಶವಿಲ್ಲದಂತಾಗುತ್ತದೆ.**

**ಅವಲೋಕನ 4: ಸ್ಥಳದಲ್ಲಿಯೇ ಅಥವಾ ವಾರ್ಡ್ ಮಟ್ಟದಲ್ಲಿ ತ್ಯಾಜ್ಯವನ್ನು ಸಂಸ್ಕರಿಸುವ ಕುರಿತು ಗಮನವಿಲ್ಲ ಮತ್ತು ಬೃಹತ್ ಉತ್ಪಾದಕರು ಸ್ಥಳದಲ್ಲಿಯೇ ವಹಿಸಬೇಕಾದ ಕರ್ತವ್ಯಗಳನ್ನು ಗೌಣವಾಗಿಸುವುದರಲ್ಲಿ ಸಮರ್ಥನೆಯಿಲ್ಲ.**

**ಇದು ನ್ಯಾಯಾಲಯ ಮತ್ತು ಘನ ತ್ಯಾಜ್ಯ ನಿರ್ವಹಣೆ ನಿಯಮಾವಳಿ 2016ರ ಪ್ರಸ್ತುತ ನಿರ್ದೇಶನದ ಪ್ರಕಾರ ಇಲ್ಲ**

**ಸ್ಥಳದಲ್ಲಿಯೇ ಮತ್ತು ವಾರ್ಡ್ ಮಟ್ಟದಲ್ಲಿ ತ್ಯಾಜ್ಯದ ಸಂಸ್ಕರಣೆಯ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ವಾಸ್ತವವಾಗಿ, ಯಾವುದೇ ಬಗೆಯ ಸಂಸ್ಕರಣೆಯ ಬಗ್ಗೆಯೂ ಸ್ಪಷ್ಟ ವಿವರಣೆಗಳಿಲ್ಲ.**

ಯಾವುದೇ ಬಗೆಯ ಅಥವಾ ಪ್ರಕಾರದ ಬೃಹತ್ ಪ್ರಮಾಣದಲ್ಲಿ ತ್ಯಾಜ್ಯವನ್ನು ಉತ್ಪಾದಿಸುವವರಿಗೆ ಆಯಾ ಸ್ಥಳದಲ್ಲಿಯೇ ತ್ಯಾಜ್ಯವನ್ನು ಸಂಸ್ಕರಿಸುವ ಕುರಿತು ಬೈಲಾದಲ್ಲಿ ಯಾವುದೇ ಸ್ಪಷ್ಟವಾದ ನಿರ್ದೇಶನವಿಲ್ಲದೇ ಇರುವುದರಿಂದ, ಅಲ್ಲದೆ, ಬಿಬಿಎಂಪಿಗೆ ಘನ ತ್ಯಾಜ್ಯ ನಿರ್ವಹಣಾ ವೆಚ್ಚವನ್ನು ಕೊಟ್ಟುಬಿಡುವುದೇ ಅಗ್ಗವಾಗುವುದರಿಂದ, ಎಲ್ಲಾ ಬೃಹತ್ ತ್ಯಾಜ್ಯ ಉತ್ಪಾಕದರು ಎಲ್ಲಾ ತ್ಯಾಜ್ಯವನ್ನು ಬಿಬಿಎಂಪಿಗೆ ಎತ್ತಿಕೊಟ್ಟುಬಿಡುತ್ತಾರೆ.

ಇದು, ಬೃಹತ್ ತ್ಯಾಜ್ಯ ಉತ್ಪಾದಕರು ಸ್ಥಳದಲ್ಲಿಯೇ ತ್ಯಾಜ್ಯದ ಸಂಸ್ಕರಣೆಯನ್ನು ಮಾಡಬೇಕು ಎನ್ನುವ ಪರಿಕಲ್ಪನೆಯನ್ನು ದುರ್ಬಲಗೊಳಿಸಿದೆ, ಬದಲಿಗೆ, ತುಂಬಾ ಕಡಿಮೆ ಸೇವಾ ಶುಲ್ಕಕ್ಕೆ ತ್ಯಾಜ್ಯವನ್ನು ಸಂಗ್ರಹಿಸಿ ಸಾಗಣೆ ಮಾಡುವ ಔಟ್‌ಸೋರ್ಸ್ ಗುತ್ತಿಗೆದಾರರ ಪರಿಕಲ್ಪನೆಯನ್ನು ಬಲಪಡಿಸಿದೆ. ಇದು, ಇತ್ತೀಚಿನ ಕೆಲವು ವರ್ಷಗಳಿಂದ ಹೆಚ್ಚು ಪ್ರಚಾರವನ್ನು ಪಡೆಯುತ್ತಿದ್ದ ಮನೆಯಲ್ಲಿ, ಆಪಾರ್ಟ್‌ಮೆಂಟುಗಳು ಮತ್ತು ಕ್ಯಾಂಪಸ್ಸುಗಳಲ್ಲಿಯೇ ತ್ಯಾಜ್ಯವನ್ನು ಕಾಂಪೋಸ್ಟ್ ಮಾಡುವ ಪ್ರಯತ್ನಗಳನ್ನು ನಾಶ ಮಾಡುತ್ತದೆ.

**ಅವಲೋಕನ 5: ಸಾರ್ವಜನಿಕ ಪ್ರಕಟಣೆ ಇಲ್ಲ ಮತ್ತು ಸಮಾಲೋಚನಾ ಪ್ರಕ್ರಿಯೆಯ ಕೊರತೆ**

ಸಾರ್ವಜನಿಕರಿಗೆ ಬಹಿರಂಗವಾಗಿ ತಿಳಿಸುವಲ್ಲಿ ಮತ್ತು ಪಾರದರ್ಶಕತೆಯನ್ನು ಅನುಸರಿಸುವಲ್ಲಿ, ಘನ ತ್ಯಾಜ್ಯ ನಿರ್ವಹಣೆ ನಿಯಮಾವಳಿ 2016ರ ನಿಯಮ 4(6), (7) (8) ಮತ್ತು ವಿಶೇಷವಾಗಿ ನಿವಾಸಿ ಘಟಕಗಳು, ಗೇಟೆಡ್ ಸಮುದಾಯಗಳು ಮತ್ತು ಹೋಟೆಲುಗಳು ಮತ್ತು ರೆಸ್ಟಾರೆಂಟುಗಳಂಥ ಬೃಹತ್ ಉತ್ಪಾದಕರು ಜೈವಿಕವಾಗಿ ಕೊಳೆಯುವ ತ್ಯಾಜ್ಯವನ್ನು ಸ್ಥಳದಲ್ಲಿಯೇ ಮಾಡುವ ಸಂಸ್ಕರಣಾ ಸೌಕರ್ಯಗಳನ್ನು ಸ್ಥಾಪಿಸುವ ಕುರಿತು ಇರುವ KSPCB ವಿಧಿಸಲಾಗಿದ್ದ ಪ್ರಚಲಿತ ನಿರ್ದೇಶನಗಳನ್ನು ದುರ್ಬಲಗೊಳಿಸುವುದಕ್ಕೆ ನೀಡಲಾಗಿರುವ ಸಮರ್ಥನೆಗಳು ಪ್ರಕಟಗೊಳಿಸುವುದು ಸಾರ್ವಜನಿಕ ಹಿತಾಸಕ್ತಿಯಾಗಿದೆ. ಇದು ಗಂಭೀರವೂ ಆಗಿದೆ.

ಇದಲ್ಲದೇ, ಶೆಡ್ಯೂಲ್ VI ನ್ನು ಪ್ರಕಟಿಸುವ ಹಿನ್ನೆಲೆಯಲ್ಲಿ ನಡೆದ ಚರ್ಚೆಯ ನಡೆವಳಿಗಳನ್ನು ಬಿಬಿಎಂಪಿ ಪ್ರಕಟಿಸಬೇಕು, ಶೆಡ್ಯೂಲ್ VI ರ ಭಾಗ I ಮತ್ತು II ನ್ನು ಅನುಮೋದಿಸಿದ ದಿನಾಂಕ ಮತ್ತು ಅಧಿಕಾರಿಯ ಹೆಸರನ್ನು ನಮೂದಿಸಬೇಕು.

ಬೈಲಾಗಳನ್ನು ರಚಿಸುವಲ್ಲಿ ಸಾರ್ವಜನಿಕ ಸಮಾಲೋಚನೆ ನಡೆದಿಲ್ಲ. ಬೈಲಾ ರಚಿಸುವುದು ಎಂದರೆ ಅದೊಂದು ಮಹತ್ವದ ಮೈಲುಗಲ್ಲು, ಬೈಲಾ ಸೃಷ್ಟಿಸುವುದು ಎಂದರೆ ಬಹಳ ಮುಖ್ಯವಾದ ಮೈಲುಗಲ್ಲು. ಇದನ್ನು ಸಹಭಾಗೀ ಪ್ರಕ್ರಿಯೆಗಳನ್ನು ಸೃಷ್ಟಿಸಲು ಮತ್ತು ಸಾಂಸ್ಥಿಕ ಸಮಗ್ರತೆ ಮತ್ತು ಘನ ತ್ಯಾಜ್ಯದ ಸುಸ್ಥಿರ ನಿರ್ವಹಣೆಗೆ ಬದ್ಧತೆಯನ್ನು ತೋರಲು ಒಂದು ಉತ್ತಮ ಅವಕಾಶವನ್ನಾಗಿ ಬಳಸಿಕೊಳ್ಳಬೇಕಾಗಿತ್ತು, ಹೀಗೆ ಮಾಡಿದ್ದರೆ ಬಾಧ್ಯಸ್ಥರ ವಿಶ್ವಾಸವೂ ಸಬಲಗೊಳ್ಳುತ್ತಿತ್ತು. ಆದರೆ, ಬಿಬಿಎಂಪಿಯು ವಿವಿಧ ಬಾಧ್ಯಸ್ಥರು, ವಾರ್ಡ್ ಸಮಿತಿಗಳು ಮತ್ತು ಘನ ತ್ಯಾಜ್ಯ ನಿರ್ವಾಹಣೆಯಲ್ಲಿ ತೊಡಗಿರುವವರು ಇವರು ಯಾರನ್ನೂ ತೊಡಗಿಸಿ ಸಮಾಲೋಚನೆ ನಡೆಸದೇ ಏಕಪಕ್ಷೀಯವಾಗಿ, ಹೆಚ್ಚು ಕಡಿಮೆ ರಹಸ್ಯವಾಗಿ, ಘನ ತ್ಯಾಜ್ಯ ನಿರ್ವಹಣಾ ಘಟಕದ ಎಲ್ಲರನ್ನೂ ಕೂಡ ಒಳಗೊಳಿಸಿಕೊಳ್ಳದೆಯೇ ಬೈಲಾ ರಚನೆ ಮಾಡಿದೆ.

**SOLID WASTE MANAGEMENT ROUND TABLE ( SWMRT)**

# PRESS NOTE

**ಘನ ತ್ಯಾಜ್ಯ ಬೈಲಾ ಕುರಿತು**

---

- ಬಿಬಿಎಂಪಿಯು ಘನ ತ್ಯಾಜ್ಯ ನಿರ್ವಹಣೆ ನಿಯಮಾವಳಿಯನ್ನು ಪ್ರಕಟಿಸಿದ ಏಪ್ರಿಲ್ 2016ರ ನಂತರ ಒಂದು **ವರ್ಷದ ಒಳಗೆ ಬಿಬಿಎಂಪಿ ಈ ಬೈಲಾವನ್ನು ರಚಿಸಬೇಕಾಗಿತ್ತು**. ಬದಲಿಗೆ ಈಗ ಮೂರೂವರೆ ವರ್ಷಗಳ ನಂತರ ಕರಡು ರಚಿಸಿದೆ.
- ಬಿಬಿಎಂಪಿ ಈ ಬೈಲಾವನ್ನು ರಾಜ್ಯದ ಕಾರ್ಯನೀತಿ ಮತ್ತು ಕಾರ್ಯತಂತ್ರಕ್ಕೆ ಅನುಗುಣವಾಗಿ ರಚಿಸಬೇಕಾಗಿತ್ತು, ಅದನ್ನು ಘನ ತ್ಯಾಜ್ಯ ನಿರ್ವಹಣೆ ನಿಯಮಾವಳಿ 2016 ಪ್ರಕಟವಾದ ಒಂದು ವರ್ಷದೊಳಗೆ ರೂಪಿಸಬೇಕಾಗಿತ್ತು. ಈ ದಿನಾಂಕದ ಕುರಿತು ರಾಜ್ಯ ಕಾರ್ಯನೀತಿ ಇರುವುದಿಲ್ಲ.
- **ಘನ ತ್ಯಾಜ್ಯ ನಿರ್ವಹಣೆ ನಿಯಮಾವಳಿ 2016ರ** ನಿಯಮ 15 ಬೈಲಾ ಪೂರೈಸಬೇಕಾದ ಹಲವಾರು ಅಗತ್ಯಗಳನ್ನು ಪಟ್ಟಿ ಮಾಡುತ್ತದೆ.
- ಬೈಲಾ, ಕರ್ನಾಟಕ **ಉಚ್ಚ ನ್ಯಾಯಾಲಯವು** 2012ರಿಂದ ತನ್ನೆದುರು ಬಂದ ಪಿಐಎಲ್‌ಗಳ ವಿಚಾರಣೆಯ ವೇಳೆಯಲ್ಲಿ ಜಾರಿ ಮಾಡಿದ ಪ್ರಗತಿಪರ **ನಿರ್ದೇಶನಗಳನ್ನೂ ಪರಿಪಾಲಿಸಬೇಕಾಗಿತ್ತು**.
- ಬೈಲಾವು ಬಿಬಿಎಂಪಿಯ 2012ರಿಂದ ಆಗಾಗ ನೀಡಿರುವ ಈ ಹಿಂದಿನ ಅಧಿಸೂಚನೆಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಮತ್ತು ಅವುಗಳಿಗೆ ಸಮಂಜಸವಾಗಿರಬೇಕು.
- ಬೈಲಾವು, ಬೆಂಗಳೂರಿನಲ್ಲಿ ಜಾರಿಯಲ್ಲಿರುವ ಮತ್ತು 2009ರಿಂದೀಚೆ ಹಲವಾರು ನವೀನತಮ ಪದ್ಧತಿಗಳು ಮತ್ತು ಪರಿಕಲ್ಪನೆಗಳಿಗೆ ಕಾರಣವಾಗಿರುವ ಅಸಾಧಾರಣವಾದ ನಾಗರಿಕ ಸಹಭಾಗಿತ್ವ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಕಡ್ಡಾಯವಾಗಿ ಗುರುತಿಸಬೇಕು ಮತ್ತು ಪರಿಗಣನೆಗೆ ತೆಗೆದುಕೊಳ್ಳಬೇಕು.

**ಇಲ್ಲಿ ಮತ್ತು ಮೇಲಿನ ಭಾಗದಲ್ಲಿ ಎತ್ತಿ ತೋರಿಸಲಾಗಿರುವ ಅಂಶಗಳು, ಬಿಬಿಎಂಪಿಯ ಕರಡು ಘನ ತ್ಯಾಜ್ಯ ನಿರ್ವಹಣಾ ಬೈಲಾವನ್ನು ಸಾರಾಸಗಟಾಗಿ ತಿರಸ್ಕರಿಸಲು ಸಮರ್ಥವಾದ ಕಾರಣಗಳಾಗಿವೆ ಎಂಬುದು ಮನವರಿಕೆಯಾಗುತ್ತದೆ, ವಿಚ್ಛಿದ್ರಕಾರಕ ಮತ್ತೆ ಪೂರ್ವಸ್ಥಿತಿಗೆ ತರಲು ಸಾಧ್ಯವಿಲ್ಲದ ಪರಿಣಾಮಗಳನ್ನು ಉಂಟು ಮಾಡದೇ ಅನುಷ್ಠಾನ ಮಾಡಲು ಸಾಧ್ಯವಿಲ್ಲ ಎಂಬುದು ನಮ್ಮ ದೃಢ ನಂಬಿಕೆಯಾಗಿದೆ.**

---

**ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ರೌಂಡ್ ಟೇಬಲ್,** SWMRT **ಬೆಂಗಳೂರು, ಸಾರ್ವಜನಿಕ ಆರೋಗ್ಯ, ಸುರಕ್ಷಿತ ಆಹಾರ, ಸ್ವಚ್ಛ ವಾಯು, ಶುದ್ಧ ನೀರು ಮತ್ತು ಅಂತರ್ಗತ ಜೀವನೋಪಾಯ ಇವುಗಳ ಸುಧಾರಣೆಗಾಗಿ ನಾಗರಿಕರು ಮತ್ತು ಮುನಿಸಿಪಾಲಿಟಿಗಳು ಸುಸ್ಥಿರವಾದ ತ್ಯಾಜ್ಯ ನಿರ್ವಹಣಾ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ 2009ರಿಂದ ಕೆಲಸ ಮಾಡುತ್ತಿರುವ ಒಂದು ಸಾರ್ವಜನಿಕ ಆಸಕ್ತಿಯ ಘನ ತ್ಯಾಜ್ಯ ನಿರ್ವಹಣೆಯ ಕಾರ್ಯಕಾರಿಗಳ ಸಾಮೂಹಿಕ ಸಂಘಟನೆ.**

**SOLID WASTE MANAGEMENT ROUND TABLE ( SWMRT)**

# PRESS NOTE

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:–** ಸದಸ್ಯರು SWMRT, ರಮಾಕಾಂತ್-[redacted]

ಸದಸ್ಯರು SWMRT, ಸಂಧ್ಯಾನಾರಾಯಣ್–[redacted]


**Solid Waste Management Round Table (SWMRT)**

swmrt.bengaluru@gmail.com

http://swmrt.com

@SWMRTBangalore

@SwmrtBengaluru

@swmrt.Bangalore


www.2bin1bag.in

SwachaGraha start a green spot

www.swachagraha.in